ಕರ್ನಾಟಕ ಸರ್ಕಾರದ ನಡವಳಿ

ವಿಷಯ: **ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮ - ಅಂತಿಮ ಆದೇಶ ಹೊರಡಿಸುವ ಕುರಿತು-ಆದೇಶ.**

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/122/ಗ್ರಾಪಂಕಾ/2011, ದಿನಾಂಕ: 19-05-2011.
2. ಅಪರ ನಿಬಂಧಕರು ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/ARE-3/ENQ-89/2011, ದಿನಾಂಕ: 03-06-2015.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ARE-3/14-A/ENQ-89/2011, ದಿನಾಂಕ: 17-01-2017.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: LOK/ARE-3/14-A/ENQ-89/2011, ದಿನಾಂಕ: 18-01-2017.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/286/ಗ್ರಾಪಂಕಾ/2015, ದಿನಾಂಕ: 30-01-2017.
6. ಶ್ರೀ ಕೆ.ಎಸ್.ಕೃಷ್ಣಮೂರ್ತಿ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ: 06-08-2015 ಮತ್ತು 01-03-2017.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಆದರಂತೆ ಅಪರ ನಿಬಂಧಕರು ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

"ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಗೆಂಡ್ಲ ಹೊಸೂರು ಗ್ರಾಮದ ವಾಸಿ ಶ್ರೀ ಮುರಳಿ ಬಿನ್ ಗೋಪಾಲಪ್ಪ ಇವರ ತಾಯಿಯಾದ ಶ್ರೀಮತಿ ಶಾಂತಕುಮಾರಿಯವರಿಗೆ ಇಂದಿರಾ ಅವಾಜ್ ಯೋಜನೆಯಡಿ ಮನೆ ಮಂಜೂರಾಗಿದ್ದು, ಈ ಸಂಬಂಧ ಪ್ರಥಮ ಬಿಲ್ ರೂ.7,500/-ಗಳನ್ನು ಪಾವತಿಸಲು ರೂ.1,000/-ಗಳ ಲಂಚದ ಹಣಕ್ಕೆ ಒತ್ತಾಯಿಸಿದ್ದು, ದಿನಾಂಕ: 02-04-2009 ರಂದು ಲಂಚದ ಹಣ ಸ್ವೀಕರಿಸಿ ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಸದರಿಯವರು ಕರ್ನಾಟಕನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮ 3(1) (i) ರಿಂದ (iii) ಅನ್ವಯ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಲೋಕಾಯುಕ್ತರು ಅಂಗೀಕರಿಸಿ ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(viii) ರ ಅನ್ವಯ **"ಸೇವೆಯಿಂದ ವಜಾಗೊಳಿಸುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್ ಅನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

- ಫಲಾನುಭವಿಯು ನಿಭಂದನೆಗಳ ಪ್ರಕಾರ ದಾಖಲಾತಿಗಳನ್ನು ಒದಗಿಸಿರಲಿಲ್ಲ ಮತ್ತು ತಳಪಾಯ ಪೂರ್ಣಗೊಳಿಸಿರುವ ಬಗ್ಗೆ ಫೋಟೋ ಒದಗಿಸಿರಲಿಲ್ಲ. ಸದರಿ ದಾಖಲೆಗಳನ್ನು ಒದಗಿಸಲು ಸೂಚಿಸಿದ್ದೇನೆ ಹೊರತು ಲಂಚಕ್ಕೆ ಒತ್ತಾಯಿಸಿರಲಿಲ್ಲ.
- ಪಿರ್ಯಾದುದಾರರು ವಿಚಾರಣಾಧಿಕಾರಿಯವರ ಮುಂದೆ ನೀಡಿದ ಸಾಕ್ಷಿಯಲ್ಲಿ ನಾನು ಲಂಚ ನೀಡುವಂತೆ ಒತ್ತಾಯಿಸಿರಲಿಲ್ಲ ಮತ್ತು ರೂ.1,000/- ಲಂಚದ ಹಣ ಸ್ವೀಕರಿಸಲಿಲ್ಲ. ಲೋಕಾಯುಕ್ತ ಪೊಲೀಸರ ನಿರ್ದೇಶನದಂತೆ ನೋಟ್‌ಗಳನ್ನು ಶ್ರೀ ಕೆ.ಎಸ್.ಕೃಷ್ಣಮೂರ್ತಿ ಅವರ ಮನೆಯಲ್ಲಿರುವ ಮಂಚದ ಮೇಲೆ ಪತ್ರಿಕೆಯ ಕೆಳಗೆ ಇರಿಸಿದೆ ಎಂದು ಹೇಳಿಕೆ ನೀಡಿರುತ್ತಾರೆ.
- ಈ ಪ್ರಕರಣದಲ್ಲಿ ನೆರಳು ಸಾಕ್ಷಿ ಆಗಿರುವ ಶ್ರೀ ಎಸ್.ಹೆಚ್.ಸುರೇಶ್ ಇವರ ಹೇಳಿಕೆ ಸತ್ಯಕ್ಕೆ ದೂರವಾಗಿದೆ. ಅವರು ಘಟನೆ ನಡೆದ ಸ್ಥಳದಲ್ಲಿ ಹಾಜರಿರಲಿಲ್ಲ.
- ತನಿಖಾಧಿಕಾರಿಯವರ ಹೇಳಿಕೆ ಸತ್ಯಾಂಶಗಳಿಂದ ಕೂಡಿರುವುದಿಲ್ಲ.
- ವಿಚಾರಣಾಧಿಕಾರಿಯವರು ಸಾಕ್ಷಿಗಳ ಹೇಳಿಕೆಯನ್ನು ನಿಷ್ಪಕ್ಷವಾಗಿ ಹಾಗೂ ವಸ್ತು ನಿಷ್ಠವಾಗಿ ಪರಾಮರ್ಶೆಮಾಡಿರುವುದಿಲ್ಲ ಹಾಗೂ ನನ್ನ ಪರವಾಗಿ ನನ್ನ ವಕೀಲರು ಸಲ್ಲಿಸಿರುವ 10 ಪುಟಗಳ ಲಿಖಿತವಾದದ ಒಂದೇ ಒಂದು ಅಂಶವನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ ಬದಲಾಗಿ ಏಕಪಕ್ಷೀಯವಾಗಿ ನಿರ್ಣಯಿಸಿ ಆರೋಪ ರುಜುವಾತುವಾಗಿದೆ ಎಂದು ತೀರ್ಮ ನೀಡಿದ್ದಾರೆ.
- ವಿಚಾರಣಾಧಿಕಾರಿಗಳು Evaluation of evidence ಆಧಾರದ ಮೇಲೆ ಸಾಕ್ಷ್ಯಗಳನ್ನು ಪರಾಮರ್ಶೆ ಮಾಡಿರುವುದಿಲ್ಲ.
- ನಾನು ಲಂಚಕ್ಕೆ ಒತ್ತಾಯಿಸಿ ರೂ.7500/- ಮೊತ್ತದ ಚೆಕ್ ನೀಡಿಲ್ಲವೆಂಬ ಹಾಗೂ ಲಂಚಕ್ಕೆ ಒತ್ತಾಯಿಸುತ್ತಿದ್ದೇನೆ ಎಂಬುದಕ್ಕೆ ಯಾವುದೇ ಸಾಕ್ಷ್ಯಧಾರಗಳು ಇರುವುದಿಲ್ಲ.
- ಮಂಚದ ಮೇಲೆ ಇಟ್ಟಿದ್ದ ಹಣವನ್ನು ನಾನು ನೋಡಿಯೇ ಇರಲಿಲ್ಲ. ಲೋಕಾಯುಕ್ತ ನಿರೀಕ್ಷಕರು ಅಶ್ಲೀಲ ಪದ ಬಳಕೆ ಮಾಡಿದ ಕಾರಣ ನಾನು ಹೆದರಿ ಮಂಚದ ಮೇಲಿದ್ದ ರೂ.500/-ಗಳ ಎರಡು ನೋಟುಗಳನ್ನು ತೆಗೆದುಕೊಟ್ಟಿರುತ್ತೇನೆ.
- ಗೌರವಾನ್ವಿತ ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಶಿವಮೊಗ್ಗ ಲೋಕಾಯುಕ್ತ ಪೊಲೀಸರು ನನ್ನ ವಿರುದ್ಧ ದಾಖಲಿಸಿದ್ದ. ಲೋಕಾಯುಕ್ತ ಕೇಸ್ SPL (PC) Case No: 9/2009 ರಲ್ಲಿ ನನ್ನನ್ನು ನಿರ್ದೋಷಿ ಎಂದು ದಿನಾಂಕ: 22/08/2013 ರಲ್ಲಿ ತೀರ್ಮ ನೀಡಲಾಗಿದೆ.

- ಗೌರವಾನ್ವಿತ ಉಪ ಲೋಕಾಯುಕ್ತರು ದಿನಾಂಕ: 17-01-2017 ರಂದು ಸರ್ಕಾರಕ್ಕೆ ಮಾಡಿರುವ ಶಿಫಾರಸ್ಸಿನಲ್ಲಿ "ಕೆ.ಎಸ್.ಕೃಷ್ಣಮೂರ್ತಿ ಎಂಬ ನನ್ನನ್ನು ಸೇವೆಯಿಂದ ವಜಾ ಮಾಡುವಂತೆ ತಮಗೆ ಶಿಫಾರಸ್ಸು ಮಾಡಿದ್ದಾರೆ."
- ಅವರು ಮಾಡಿರುವ ಶಿಫಾರಸ್ಸು ನಿಯಮದ ಪ್ರಕಾರ ಕಠಿಣ ದಂಡನೆ ವ್ಯಾಪ್ತಿಯಡಿ ಬಂದರೂ ಸಹ ನೌಕರನಾದ ನನಗೆ ಬಹಳ ಕಠೋರವಾಗಿದ್ದು ಮಾತ್ರವಲ್ಲದೆ ಆರೋಪಕ್ಕೆ ಸರಿಸಮನಾದ ದಂಡನೆ ಆಗಿರುವುದಿಲ್ಲ. ಆದ್ದರಿಂದ ಅವರು ಮಾಡಿರುವ ಶಿಫಾರಸ್ಸನ್ನು ಸಹಜ ನ್ಯಾಯದ ದೃಷ್ಟಿಯಿಂದ ಮತ್ತು ಮಾನವೀಯತೆಯ ದೃಷ್ಟಿಯಿಂದ ತಾವು ಒಪ್ಪಿಕೊಳ್ಳಬಾರದೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯ ಕಂಡಿಕೆ 11 ರಿಂದ 20 ರಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷೀಪ್ತ ಸಾರಾಂಶ ಈ ಕೆಳಗಿನಂತಿದೆ.

11. The learned counsel for the DGO contend that the complainant has turned hostile to the case of disciplinary authority and has not supported the case of disciplinary authority as to the demand of the bribe and its acceptance by the DGO. The learned Presenting Officer contend that it is necessary to consider entire evidence of PW-1 and 2 which clearly show that the work of the mother of the complainant was pending with the DGO and in that connection, the DGO has made demand of Rs.2000/- which was reduced to Rs.1000/- and while accepting it, the DGO was trapped.

12. According to Ex P1 which is the complaint of PW-1, he met the DGO on 30/03/2009 to release first installment of Rs.7500/- towards the construction of Ashraya Scheme house upto foundation level and for that the DGO demanded Rs.2000/- and that was reduced to Rs.1000/- and unless i.e., done, the DGO is not going to process the file relating to PW-1. Though in the examination-in-chief PW-1 did not say the DGO demanded the bribe, the cross examination by the learned Presenting Officer is important wherein, PW-1 has made the clear admissions to show that the DGO demanded and accepted the bribe amount. PW-1 in the cross examination by the learned Presenting Officer admits that he has studied upto PUC and has written the complaint and wrote it after understanding the contents and of Ex P1 are true. PW1 also admits that it is true that there is recital in the complaint that when he met the DGO, he made a demand of Rs.2000/- and for that PW-1 told that he is poor and the amount was reduced to Rs.1000/-. Now PW-1 makes a voluntary statement stating that at the instance of Lokayukta Inspector, he has written it, But, however this cannot be accepted because PW-2 is educated upto PUC, he himself has written the complaint. Therefore, the evidence of PW-1 in the cross examination when read together with evidence in examination-in-chief shows that he met the DGO on 30/03/2009 and for release of amount of Rs.7500/- the DGO demanded Rs.2000/- which on bargain reduced to Rs.1000/- further PW-1 in Para – 6 of the cross examination clearly admits as under:

It is true to say that I gave the amount to the DGO only when it was definite that he will not issue the cheque unless payment was made to him.

This evidence of PW-1 is sufficient to show that he paid the amount because he was sure that unless the amount is paid, the DGO is not going to issue the cheque. Hence, the contention of learned counsel for the DGO

that the complainant has turned hostile to the case of disciplinary authority and therefore, there is no evidence cannot be accepted as a correct contention.

13. It is further contended by the learned counsel for the DGO that the beneficiary has not filed the complaint. The complainant is the son of the beneficiary by name Smt.Shanthakumari. If PW-1 has represented his mother, no fault can be found with it because PW-1 and his mother are residents of Gendla Hosur village and we cannot expect the mother of the complainant to visit the office of the DGO every now and then.

14. It is contended by the learned counsel for the DGO that the application of Smt.Shanthakumari is incomplete and when the complainant met the DGO on 2/4/2009, he told the complainant to produce the necessary documents and i.e., the only talks he had with the complainant. But, however, the official practice show that the DGO should have called upon the complainant or his mother to produce the necessary documents so as to enable him to issue the cheque. The DGO has not issued any endorsement to the complainant. The DGO in his statement at Ex P9 before PW-3, immediately after the trap does not mention that the mother of the complainant was required to produce certain documents to complete the processing of the file. Hence, contention of the DGO cannot be accepted.

15. It is contended by the learned counsel for the DGO that Ex P5, the documents filed does not contain all the requirements under the guidelines for issue of the first cheque to the name of the beneficiary. Had it been so, the DGO should have rejected the claim of Smt.Shanthakumari.

16. According to the DGO, when complainant came to his house without notice of the DGO, PW-1 kept the amount below the newspaper on the cot and DGO was unaware of it. But however at Ex P12 which show that the presence of Phenolphthalein is detected in right hand finger washes of the DGO. This proves that the DGO has handled the money given he says that DGO made a signal and at that time, PW-1 paid the amount which was received by the DGO and kept it on the cot. PW-2 specifically states that a paper was found on the cot and on that the amount was kept. Hence, the evidence of PW-1 and 2 is sufficient to show the misconduct on the part of the DGO. The notes were recovered from the cot and cross checked and found to be same which wear given to PW-1 at the time of entrustment mahazar. The documents produced by the disciplinary authority show that the work of mother of PW-1 was pending with DGO.

17. It is further contended by the learned counsel for the DGO that Pw-2 Was not able to see what is going inside the house of the DGO because the window was covered with a curtain. DW-1 has spoken that the window was always closed to prevent the flow of dust in the house. In the cross examination PW-2 says that the below portion of the window was closed whereas upper portion was open and therefore, he was able to see. PW-3 in Para No.13 of cross examination states that if the window is closed, outsiders will not be able to know what is going in the house. This cannot be taken as an admission because if the window is closed then only outsiders will be unable to see what is going on inside the house. As PW-2 was able to see what is going on inside the house through the upper portion,

it can be believed that there can be no other circumstances to reject his testimony.

18. It is contended by the learned counsel for the DGO that there is no affirmative statement by PW-2 that the amount kept on the cot was with notice to the DGO. This cannot be accepted because PW-1 went inside the house, questioned the DGO about the work and then placed the amount and came out. In this regard, PW2 specifically stated that the DGO made the signal and on that basis, the amount was received by the DGO from PW-1 and thereafter it was kept on the cot. Therefore, it cannot be said that there is no affirmative statement by PW-2 That amount was kept on the cot with notice to the DGO. But it is actually the DGO who kept the amount on the cot after receiving from the complainant. If the DGO had not touched the amount, there would not have been change of color of sodium carbonate solution and the scientific report at Ex P12. When the amount was found on the cot, the question of amount being found in the shirt pocket of the DGO does not arise.

19. The incident has taken place in the house of the DGO and in his presence. According to DGO only the amount is kept without his knowledge by PW-1 and he was unaware of it. Therefore, the claim of learned counsel for the DGO that the amount was not found from the possession of the DGO is not correct and cannot be accepted. Moreover, it is not the case of the disciplinary authority that the amount was found from the possession of the DGO.

20. Therefore, the oral and documentary evidence produced by the disciplinary authority shows full proof to the charges framed against the DGO and the evidence of disciplinary authority is more probable than the defence of the DGO. Hence point no.1 is answered in the affirmative.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀರ್ವತೆಗೆ ಅನುಗುಣವಾಗಿ ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ರವರಿಗೆ **"ಸೇವೆಯಿಂದ ವಜಾಗೊಳಿಸುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಶ್ರೀ ಕೆ.ಎಸ್.ಕೃಷ್ಣಮೂರ್ತಿ ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ, ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(viii) ರ ಅನ್ವಯ **"ಸೇವೆಯಿಂದ ವಜಾಗೊಳಿಸುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/286/ಗ್ರಾಪಂಕಾ/2015, ಬೆಂಗಳೂರು, ದಿನಾಂಕ: 06-07-2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯಿತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(viii) ರ ಅನ್ವಯ **"ಸೇವೆಯಿಂದ ವಜಾಗೊಳಿಸುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು–3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಶಿವಮೊಗ್ಗ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಸೊರಬ, ಶಿವಮೊಗ್ಗ ಜಿಲ್ಲೆ.
7. ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಗೆಂಡ್ಲ ಗ್ರಾಮ ಪಂಚಾಯತಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
8. ಗಣಕ ಕೋಶ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.